**ಕರ್ನಾಟಕ ಸರ್ಕಾರ**

ಸಂಖ್ಯೆ:ಗಭೂಇ/ಡಿಸಿಬಿ/2024-25
20,064

ನಿರ್ದೇಶಕರ ಕಛೇರಿ,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು-560001. ದಿನಾಂಕ:24.01.2025
e-mail: dcbdmg@gmail.com

28 JAN 2025

**ಸುತ್ತೋಲೆ**

ವಿಷಯ: ಕರ್ನಾಟಕ ಉಪ ಖನಿಜ ರಿಯಾಯಿತಿ ತಿದ್ದುಪಡಿ ನಿಯಮಾವಳಿಗಳು 2024 ರನ್ವಯ ದಿನಾಂಕ:01.01.2025 ರಿಂದ ಜಾರಿಗೆ ಬರುವಂತೆ ಉಪ ಖನಿಜಗಳ ರಾಜಧನ ದರಗಳನ್ನು ಪರಿಷ್ಕರಿಸಿರುವ ಕುರಿತು.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ-ಎಂಎಂಎನ್/ 202/ 2023 ದಿನಾಂಕ:01.01.2025.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಅಧಿಸೂಚನೆ ಪತ್ರದಲ್ಲಿ, **<u>ದಿನಾಂಕ: 01.01.2025 ರಿಂದ ಜಾರಿಗೆ ಬರುವಂತೆ</u>** ಕರ್ನಾಟಕ ಉಪ ಖನಿಜ ರಿಯಾಯಿತಿ ತಿದ್ದುಪಡಿ ನಿಯಮಾವಳಿಗಳು 2024 ರನ್ವಯ ಉಪ ಖನಿಜಗಳ ಮೇಲೆ ರಾಜಧನ ದರಗಳನ್ನು ಪರಿಷ್ಕರಿಸಲಾಗಿದೆ. ವಿವರಗಳು ಕೆಳಕಂಡಂತಿರುತ್ತದೆ. ತಿದ್ದುಪಡಿ ಅಧಿಸೂಚನೆ ಪ್ರತಿಯನ್ನು ಮಾಹಿತಿಗಾಗಿ ಈ ಪತ್ರದೊಂದಿಗೆ ಲಗತ್ತಿಸಿದೆ.

| ಕ್ರ. ಸಂ. | ಉಪ ಖನಿಜ | ರಾಜಧನ ಪ್ರತಿ ಮೆಟ್ರಿಕ್ ಟನ್ ಗೆ | ಪರಿವರ್ತನ ಕೋಷ್ಟಕ ಕ್ಯೂಬಿಕ್ ಮೀಟರ್ ನಂತೆ | ರಾಜಧನ ಪ್ರತಿ ಕ್ಯೂಬಿಕ್ ಮೀಟರ್ ಗೆ |
|---|---|---|---|---|
| 1 | ಕಟ್ಟಡ ಕಲ್ಲು Size Stone | ರೂ.80 | 1 ಕ್ಯೂಬಿಕ್ ಮೀಟರ್ ಗೆ=2.63 ಟನ್ | ರೂ.210.40 |
| 2 | ಲ್ಯಾಟರೈಟ್ ಸ್ಟೋನ್ | ರೂ.70 | 1 ಕ್ಯೂಬಿಕ್ ಮೀಟರ್ ಗೆ=1.80 ಟನ್ | ರೂ.126.00 |
| 3 | ಜಲ್ಲಿ/ಮೆಟಲ್ ಎಲ್ಲಾ ವಿಧವಾದ (ಪುಡಿ ಗ್ರಾನೈಟ್/ ಕ್ವಾರ್ಟ್ಜೈಟ್) | ರೂ.80 | 1 ಕ್ಯೂಬಿಕ್ ಮೀಟರ್ ಗೆ=1.80 ಟನ್ | ರೂ.144.00 |
| 4 | ಮರಳು | ರೂ.80 | 1 ಕ್ಯೂಬಿಕ್ ಮೀಟರ್ ಗೆ=1.72 ಟನ್ | ರೂ.137.60 |
| 5 | ಗ್ರಾವೇಲ್(ಮುರಂ) | ರೂ.50 | 1 ಕ್ಯೂಬಿಕ್ ಮೀಟರ್ ಗೆ=1.50 ಟನ್ | ರೂ.75.00 |
| 6 | ಮಣ್ಣು (ಕ್ಲೇ) (ಎಲ್ಲಾ ತರಹದ ಹೆಂಚು ಮತ್ತು ಇಟ್ಟಿಗೆ ತಯಾರಿಕೆಗಾಗಿ) | ರೂ.70 | 1 ಕ್ಯೂಬಿಕ್ ಮೀಟರ್ ಗೆ=1.50 ಟನ್ | ರೂ.105.00 |

ಕಲ್ಲುಗಣಿ ಗುತ್ತಿಗೆದಾರರು ಕರ್ನಾಟಕ ಉಪ ಖನಿಜ ರಿಯಾಯಿತಿ ತಿದ್ದುಪಡಿ ನಿಯಮಾವಳಿಗಳು 2023 ರಂತೆ ಸರ್ಕಾರಿ ಜಮೀನುಗಳಲ್ಲಿ ಹರಾಜು ರಹಿತವಾಗಿ ಗುತ್ತಿಗೆ ಹೊಂದಿರುವ ಕಲ್ಲುಗಣಿ ಗುತ್ತಿಗೆದಾರರಿಗೆ, ನಿಯಮ 3A (a)

ಮತ್ತು 3A (b) ರಡಿ ಕಾರ್ಯದೇಶ ನೀಡುವ ಕಾರ್ಯನುಮತಿದಾರರು ಮತ್ತು ಪಟ್ಟಾ ಜಮೀನುಗಳ ಮರಳು ಗಣಿ ಗುತ್ತಿಗೆದಾರರಿಂದ ಉಪ ಖನಿಜ ಪ್ರಮಾಣಕ್ಕೆ ರಾಜಧನ, ರಾಜಧನದ ಶೇ.40 ರಷ್ಟು ಹೆಚ್ಚುವರಿ ಪಾವತಿ (AP) ಯನ್ನು ಸಂಗ್ರಹಿಸಲು ಹಾಗೂ ಈ ರೀತಿ ಹೆಚ್ಚುವರಿ ಪಾವತಿ (AP) ಸಂಗ್ರಹಿಸುವ ಪ್ರಕರಣಗಳಲ್ಲಿ ರಾಜಧನ ಶೇ.10 ರಷ್ಟು ಮೊತ್ತವನ್ನು ಡಿಎಂಎಫ್ ನಿಧಿ ವಂತಿಕೆಯನ್ನು ಸಂಗ್ರಹಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ.

ಹರಾಜು ಮೂಲಕ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಪಡೆದಿರುವ ಗುತ್ತಿಗೆದಾರರಿಗೆ ರಾಜಧನ, ಹೆಚ್ಚುವರಿ ನಿಯತಕಾಲಿಕ ಸಂದಾಯ ಮೊತ್ತ (APP) ಮತ್ತು ರಾಜಧನದ ಶೇ.10 ರಷ್ಟು ಮೊತ್ತ ಡಿಎಂಎಫ್ ನಿಧಿ ವಂತಿಕೆಯನ್ನಾಗಿ ಸಂಗ್ರಹಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ.

ಮುಂದುವರೆದು, ಹೆಚ್ಚುವರಿ ಪಾವತಿ (AP) ಮೊತ್ತದ ಸಂಗ್ರಹಣೆಯು ನಿಯಮ 3-F ರಡಿ ಹಾಗೂ ನಿಯಮ 32 ರಡಿ ಮಂಜೂರು ಮಾಡುವ ಉಪ ಖನಿಜ ಗಣಿ ಗುತ್ತಿಗೆ/ ಲೈಸೆನ್ಸ್ ಗಳಿಗೆ ಅನ್ವಯಿಸತಕ್ಕದಲ್ಲ. ಈ ಪ್ರಕರಣಗಳಲ್ಲಿ, ರಾಜಧನ ಶೇ.30 ರಷ್ಟು ಮೊತ್ತವನ್ನು ಡಿಎಂಎಫ್ ನಿಧಿ ವಂತಿಕೆಯನ್ನಾಗಿ ಸಂಗ್ರಹಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಮೇಲ್ಕಂಡ ಅಂಶಗಳನ್ನು ತಮ್ಮ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ನಿರ್ದೇಶಕರು